ಅ). ಜಯನಗರ ಕೇಂದ್ರೀಯ ಔಷಧಾಗಾರಕ್ಕೆ ಕೆಲವು ವಸ್ತುಗಳನ್ನು ಸರಬರಾಜು ಮಾಡುವ ಬಗ್ಗೆ ಟೆಂಡರ್ ಕರೆಯದೇ ಇರುವುದು ಸರ್ಕಾರದದ ಗಮನಕ್ಕೆ ಬಂದಿದೆಯೇ?

ಆ) ಸರ್ಕಾರದ ಗಮನಕ್ಕೆ ಬಂದಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು? ಟೆಂಡರ್ ಕರೆಯದೇ ಎಷ್ಟು ವರ್ಷಗಳಾಗಿರುತ್ತದೆ.

ಇ) ಇಷ್ಟು ವರ್ಷಗಳಿಂದ ಟೆಂಡರ್ ಕರೆಯದೆ ಇದ್ದುದರಿಂದ ಸರ್ಕಾರದ ಬೊಕ್ಕಸಕ್ಕೆ ಆದ ನಷ್ಟ ಎಷ್ಟು? ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದೆ?

ಈ) ಟೆಂಡರ್ ಕರೆಯಲು ಕೇಂದ್ರೀಯ ಔಷಧಿಗಾರದ ಅಧೀಕ್ಷಕರು ಸಭೆ ಕರೆಯುವ ಬಗ್ಗೆ ಅಧ್ಯಕ್ಷರಿಗೆ ಯಾವಾಗ ಕಾಗದ ಬರೆದಿರುತ್ತಾರೆ.

ಉ) ಅಧ್ಯಕ್ಷರು ಟೆಂಡರ್ ಕರೆಯುವ ಸಭೆಯನ್ನು ಕರೆಯಲು ಮೀನಾ ಮೇಷ ಎಣಿಸುವುದಕ್ಕೆ ಕಾರಣಗಳೇನು?

ಶ್ರೀ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ದಿನಾಂಕ 23-2-95ರಲ್ಲಿ ಟೆಂಡರಗಳನ್ನು ಕರೆಯಲಾಗಿದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ದಿನಾಂಕ 15-7-94ರಲ್ಲಿ ಮುಖ್ಯ ಅಧೀಕ್ಷಕರು ಪೇಮೆಂಟ್ ಮತ್ತು ಶಾಸ್ತ್ರೀಯ ಔಷಧಿಗಳ ಸರಬರಾಜಿನ ಬಗ್ಗೆ ಟೆಂಡರಗಳನ್ನು ಕರೆಯಲು ಪತ್ರವನ್ನು ಬರೆದಿರುತ್ತಾರೆ.

ಉ) ಉದ್ಭವಿಸುವುದಿಲ್ಲ.

ಬೆಂಗಳೂರು ನಗರದಲ್ಲಿ ಸರ್ಕಾರಿ ಮತ್ತು ಖಾಸಗಿ ಶಾಲೆಗಳ ಬಗ್ಗೆ

939 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಸರ್ಕಾರಿ ಪ್ರಾಥಮಿಕ ಪ್ರೌಢಶಾಲೆಗಳು -ಪದವಿಪೂರ್ವ ಕಾಲೇಜುಗಳು ಸಂಖ್ಯೆ ಎಷ್ಟು; ಅವುಗಳಲ್ಲಿ ಓದುತ್ತಿರುವ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು?

ಆ) ಬೆಂಗಳೂರು ನಗರದಲ್ಲಿರುವ ಖಾಸಗಿ ಪ್ರಾಥಮಿಕ ನರ್ಸರಿ, ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು, ಪದವಿಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಓದುತ್ತಿರುವ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸಂಖ್ಯೆಗಳು ಎಷ್ಟು?

ಇ) ಖಾಸಗಿ ಶಾಲೆಗಳಲ್ಲಿ ವಿವೇಚನೆ ನಿಲುಕದಷ್ಟು ವಂತಿಗೆ ಹಾಗೂ ಶುಲ್ಕ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಖಾಸಗಿ ಶಾಲೆಗಳಿಂದ ಈ ರೀತಿಯ ವಸೂಲಿಯನ್ನು ನಿಯಂತ್ರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಜಿ. ಗೋವಿಂದ ಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) ಬೆಂಗಳೂರು ನಗರದಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಗಳು 1217 ಹಾಗೂ ಪ್ರೌಢಶಾಲೆಗಳು 64. ಓದುತ್ತಿರುವ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸಂಖ್ಯೆ :

	ಗಂಡು	ಹೆಣ್ಣು
ಪ್ರಾಥಮಿಕ ಶಾಲೆ	127903	126887
ಪ್ರೌಢ ಶಾಲೆ	10583	10964
23 ಸರ್ಕಾರಿ ಪದವಿಪೂರ್ವ ಕಾಲೇಜುಗಳಿವೆ.		
ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ	9702	5873

ಆ) ಬೆಂಗಳೂರು ನಗರದಲ್ಲಿರುವ ಖಾಸಗಿ :

ನರ್ಸರಿ ಶಾಲೆಗಳು	195
ಪ್ರಾಥಮಿಕ ಶಾಲೆಗಳು	1303
ಪ್ರೌಢಶಾಲೆಗಳು	663

ಓದುತ್ತಿರುವ ವಿದ್ಯಾರ್ಥಿ : ವಿದ್ಯಾರ್ಥಿನಿಯರ ಸಂಖ್ಯೆ :

	ಗಂಡು	ಹೆಣ್ಣು
ನರ್ಸರಿ	12522	14588
ಪ್ರಾಥಮಿಕ	272371	238204
ಪ್ರೌಢಶಾಲೆಗಳು	76176	68824
101 ಖಾಸಗಿ ಪದವಿಪೂರ್ವ ಕಾಲೇಜುಗಳಿವೆ.		
ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ	21743	16647

ಇ) ಪದವಿಪೂರ್ವ ಕಾಲೇಜುಗಳನ್ನು ಹೊರತುಪಡಿಸಿ, ಪ್ರಾಥಮಿಕ, ಹಾಗೂ ಪ್ರೌಢಶಾಲೆಗಳ ಬಗ್ಗೆ ದೂರುಗಳು ಬಂದಿದೆ.

ಈ) ವಂತಿಗೆ ಹಾಗೂ ಶುಲ್ಕ ವಸೂಲಿ ಮಾಡುತ್ತಿರುವ ಬಗ್ಗೆ ದೂರುಗಳು ಬಂದಿದ್ದು ಕ್ರಮ ಜರುಗಿಸುವ ಕುರಿತು ಪರಿಶೀಲಿಸಲಾಗುತ್ತಿದೆ.